ರಾಜ್ಯದಲ್ಲಿ ಅಕ್ಟ್ರಾಯ್ ಪದ್ಧತಿ ಜಾರಿ.

3381(4397) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಗರಸಭೆಗಳು ಹಾಗೂ ಕಾರ್ಪೊರೇಷನ್‌ಗಳು ಆರ್ಥಿಕ ಮುಗ್ಗಟ್ಟಿನಿಂದ ತೊಂದರೆಗೊಳಗಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆರ್ಥಿಕ ಮುಗ್ಗಟ್ಟನ್ನು ಹೋಗಲಾಡಿಸಲು ಪುನಃ ಅಕ್ಟ್ರಾಯ್ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಆರ್ಥಿಕ ಮುಗ್ಗಟ್ಟನ್ನು ತಪ್ಪಿಸಲು ಸರ್ಕಾರ ನಗರಸಭೆ ಹಾಗೂ ಕಾರ್ಪೊರೇಷನ್‌ಗಳಿಗೆ ವಿಶೇಷ ಸಹಾಯಧನ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಎಸ್.ಸಿ./ಎಸ್.ಟಿ ಹಾಸ್ಟೆಲ್‌ಗಳಿಗೆ ಕಟ್ಟಡಗಳ ನಿರ್ಮಾಣ.

3382(4396) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ಇರುವ ಎಸ್.ಸಿ. : ಎಸ್.ಟಿ. ಮೆಟ್ರಿಕ್ ಪೂರ್ವ ಹಾಗೂ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿ ವಸತಿನಿಲಯಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು.

2. ಇವುಗಳಲ್ಲಿ ಎಷ್ಟು ಹಾಸ್ಟೆಲ್‌ಗಳಿಗೆ ಕಟ್ಟಡ ಇದೆ?

3. ಬೆಳಗಾಂ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೆ ಕಟ್ಟಡ ಇರದೇ ಇರುವುವುಗಳ ಸಂಖ್ಯೆ ಎಷ್ಟು?

4. ಬೈಲಹೊಂಗಲ ಮತ ಕ್ಷೇತ್ರದಲ್ಲಿ ಕಟ್ಟಡ ಇಲ್ಲದ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು? ಹಾಸ್ಟೆಲ್ ಕಟ್ಟಲು ಗ್ರಾಮಸ್ಥರು ಜಾಗವನ್ನು ನೀಡಿದ್ದರೂ ಸಹಹ ಇದುವರೆವಿಗೂ ಕಟ್ಟಡ ಕಟ್ಟಲು ವಿಳಂಬವಾಗುತ್ತಿರಲು ಕಾರಣಗಳೇನು?